<u>ಸಾಕ್ಷಿಯು ದಿನಾಂಕ **02.08.2023** ರಂದು ಪ್ರಮಾಣ ವಚನ ಬೋದಿಸಲಾಯಿತು.</u>

<u>ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ. ಕೆವಿಪಿ ವಕೀಲರಿಂದಃ</u>

ತನ್ನ ತಾಯಿ ದಿನಾಂಕ 26.07.2021 ರಲ್ಲಿ ಮೃತರಾಗಿರುತ್ತಾರೆ. ತನ್ನ ತಂದೆಯ ಹೆಸರಿನಲ್ಲಿ ಮತ್ತು ತೋಪಲಮ್ಮ ಹೆಸರಿನಲ್ಲಿರುವ ದಾವಾ ಆಸ್ತಿಯ ಪಹಣಿಯನ್ನು ಕೊಟ್ಟಿರುತ್ತೇನೆ. ನಿಪಿ-3 ರ ಪಹಣಿಯಲ್ಲಿರುವ ಎಲ್ಲಾ ಹೆಸರುಗಳು ತನ್ನ ಕುಟುಂಬದವರಾಗಿರುತ್ತಾರೆ. ನಿಪಿ-3 ರ ಪಹಣಿಯಲ್ಲಿರುವ ಎಲ್ಲಾ ವ್ಯಕ್ತಿಗಳು ಹಾಲಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-3 ರ ಪಹಣಿಯಂತೆ ತನ್ನ ಕುಟುಂಬದ ಎಲ್ಲಾ ಸದಸ್ಯರಿಗೆ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ತಮ್ಮ ಪರವಾಗಿ ನ್ಯಾಯಾಲಯದಿಂದ ಡಿಕ್ರಿಯಾಗಿರುತ್ತದೆ ತನ್ನ ತಂದೆ ನಿಪಿ-1 ರ ಪ್ರಕಾರ ಸರ್ವೇನಂಬರ್ 67 ನ್ನು ಖರೀದಿ ಮಾಡಿರುತ್ತಾರೆ.

2. ಸರ್ವೇನಂಬರ್ 67 ರ ಜಮೀನು ಹಾಲಿ ದಾವೆಯಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ದಾಖಲೆಗಳನ್ನು ಎಲ್ಲಾ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ತಾನು ಪ್ರತಿವಾದಿಯನ್ನು ಸರ್ವೇ ನೋಟೀಸ್ ತೆಗೆದುಕೊಂಡು ಬಂದಾಗ ಮನೆಯ ಬಳಿ ನೋಡಿರುತ್ತೇನೆ. ನಂತರ ತಾನು ಪ್ರತಿವಾದಿಯನ್ನು ಯಾವಾಗಲೂ ನೋಡಿರುವುದಿಲ್ಲ. ಹಾಲಿ ದಾವೆಯನ್ನು ಪ್ರತಿವಾದಿ ತೊಂದರೆ ಕೊಡುತ್ತಾನೆ ಎಂದು ಹಾಕಿರುತ್ತೇನೆ. ಪ್ರತಿವಾದಿಯು ಜಮೀನಿನ ಬಳಿ ಮತ್ತು ಮನೆಯ ಬಳಿ ಬಂದು ತೊಂದರೆ ಮಾಡಿರುತ್ತಾನೆ. ಹಾಲಿ ದಾವೆಯಲ್ಲಿ ದಾವಾ ಸ್ವತ್ತಿಗೆ ಪೆನ್ಸಿಂಗ್ ಹಾಕಿರುವ ಬಗ್ಗೆ ದಾಖಲೆ ಕೊಟ್ಟಿರುವುದಿಲ್ಲ. ದಾವಾ ಸ್ವತ್ತಿನಿಂದ ಪ್ರತಿವಾದಿಯ ಸ್ವತ್ತು ಪಶ್ಚಿಮದ ಕಡೆಗೆ ಇರುತ್ತದೆ. ಪ್ರತಿವಾದಿ ಅವರ ಸ್ವತ್ತಿಗೆ ಪೆನ್ನಿಂಗ್ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಹಾಲಿ ದಾವೆಯನ್ನು ಪ್ರತಿವಾದಿ ತಮ್ಮ ಜಮೀನಿನಲ್ಲಿ ಕಲ್ಲಿನ ಕಾಂಪೌಂಡ್ ಹಾಕುವ ಬಗ್ಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

3. ಪ್ರತಿವಾದಿ ಸರ್ವೇನಂಬರ್ 104/2 ರ 2 ಎಕರೆ 10 ಗುಂಟೆ ಜಮೀನನ್ನು ಖರೀದಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸರ್ವೇನಂಬರ್ 104/2 ನ್ನು ಪ್ರತಿವಾದಿ ಭೂ ಪರಿವರ್ತನೆ ಮಾಡಿ ನಿವೇಶನಗಳಾಗಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿ ಜಮೀನನ್ನು ಅಳತೆ ಮಾಡುವಾಗ ಆಜುಬಾಜುಗಾರರಿಗೆ ನೋಟೀಸ್ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಕೇಳುವ ಜಮೀನಿನಲ್ಲಿ ನನಗೂ ಹಕ್ಕು ಇರುತ್ತದೆ. ತಾನು ಸರ್ವೇನಂಬರ್ 104/2 ಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಕೊಟ್ಟಿರುವುದಿಲ್ಲ, ಆದರೆ ಸರ್ವೇನಂಬರ್ 104/3 ಕ್ಕೆ ಸಂಬಂದಿಸಿದಂತೆ ದಾಖಲೆಗಳನ್ನು ಕೊಟ್ಟಿರುತ್ತೇನೆ. ಪ್ರತಿವಾದಿಯ ಚೆಕ್ಕುಬಂಧಿ ಪೂರ್ವಕ್ಕೆ ಮಂಗಮ್ಮ, ಪಶ್ಚಿಮಕ್ಕೆ ವೀರಪ್ಪ , ಉತ್ತರಕ್ಕೆ ಮುಸ್ಲಿಂರ ಸ್ಮಶಾನ ಮತ್ತು ದಕ್ಷಿಣಕ್ಕೆ ಸುಬ್ಬಯ್ಯರವರ ಸ್ವತ್ತು ಇರುವ ಬಗ್ಗೆ ನನಗೆ ಗೊತ್ತಿಲ್ಲ. ತನಗೆ ಮೇಲಿನ ಚೆಕ್ಕುಬಂಧಿಯ ಮೇಲಿ ಹಕ್ಕು ಇರುತ್ತದೆ. ತನ್ನ ಜಮೀನಿಗೆ ಪ್ರತಿವಾದಿ ಬಂದು ಜಗಳ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ತಾನು ಹಾಲಿ

ದಾವೆಯಲ್ಲಿ ತನ್ನ ಸ್ವತ್ತು ಮತ್ತು ಪ್ರತಿವಾದಿ ಸ್ವತ್ತು ಕೇಳಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ತಾನು ಹಾಲಿ ದಾವೆಯಲ್ಲಿ ಹಾಕಿರುವ ದಾಖಲೆಗಳಿಗೆ ಮತ್ತು ದಾವಾ ಸ್ವತ್ತಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಹಾಲಿ ದಾವಾ ಸ್ವತ್ತಿನ ಬಗ್ಗೆ ಗೊತ್ತಿಲ್ಲದಿದ್ದರು ಸಹ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

Sd/-

(ವಿನೋದ್ ಕುಮಾರ್ ಎಂ )

C/C 2 ನೇ ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ, ಕೆಜಿಎಫ್.